**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ873 /2025**

**ಸಿ.ಡಬ್ಲ್ಯೂಃ 6, ಪಿ.ಡಬ್ಲ್ಯೂಃ 5**

ಸಾಕ್ಷಿದಾರರ ಹೆಸರು : ಮಾದೇಶ

ತಂದೆಯ ಹೆಸರು : ಹೊನ್ನಪ್ಪ ನಾಯ್ಕ

ವಯಸ್ಸು : 43 ವರ್ಷ

ಉದ್ಯೋಗ : ಪಿಗ್ಮಿ ಕಲೆಕ್ಟರ್

ವಾಸ್ತವ್ಯ : ಮುಂಡಳ್ಳಿ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 06/03/2026**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 18.10.2024 ರಂದು ಪೊಲೀಸರು ಠಾಣೆಯಲ್ಲಿ ನನಗೆ ಮತ್ತು ಚಾಸಾ 7 ರವರಿಗೆ ಪಂಚನಾಮೆಗೆ ಕರೆದಿದ್ದರು. ನೀಲಿ ಮತ್ತು ಕೆಂಪು ಬಣ್ಣದ ಟೀ ಶರ್ಟ ಹಾಗೂ ಹಾಪ್ ಪ್ಯಾಂಟ್ ಅನ್ನು ಚಾಸಾ 8 ರವರು ಠಾಣೆಗೆ ಹಾಜರುಪಡಿಸಿದ್ದು ಇರುತ್ತದೆ. ಪಂಚನಾಮೆಯನ್ನು ಸಂಜೆ 5.00 ರಿಂದ 6.45 ಗಂಟೆಯವರೆಗೆ ಠಾಣೆಯಲ್ಲಿ ಮಾಡಿದ್ದರು. ಟೀ ಶರ್ಟ ಹಾಗೂ ಪ್ಯಾಂಟಿನ ಮೇಲೆ ರಕ್ತದ ಕಲೆ ಇತ್ತು . ಆ ಕಾಲಕ್ಕೆ ನನ್ನ ಸಹಿಯನ್ನು ಪಡೆದಿದ್ದರು ಮತ್ತು ವಿಡಿಯೋ ಶೂಟಿಂಗ್ ಮಾಡಿದ್ದರು.

2. ಸಾಕ್ಷಿ ಮುದ್ದೆ ಮಾಲನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಜಪ್ತು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ– 5 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 5 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ವಿ ಎಪ ಜಿ ವಕೀಲರಿಂದ,**

ದೂರುದಾರರು ನನ್ನ ತಮ್ಮ ಆಗಿದ್ದಾರೆ. ಚಾಸಾ 8 ನನ್ನ ಭಾವ ಆಗಿದ್ದಾರೆ. ಪಂಚನಾಮೆಗೆ ಬರಲು ನನಗೆ ನೊಟೀಸನ್ನು ನೀಡಿದ್ದು ಇಲ್ಲಾ. ಪಂಚನಾಮೆಯನ್ನು ಠಾಣೆಯಲ್ಲಿ ಬರೆದಿದ್ದರು. ಪಂಚನಾಮೆ ಬರೆಯಲು ಮಾಹಿತಿ ನಾನು ನೀಡಿರುತ್ತೇನೆ. ಬಟ್ಟೆಗಳನ್ನು ನನಗೆ ಠಾಣೆಯಲ್ಲಿ ತೋರಿಸಿದ್ದರು. ಜಪ್ತು ಪಂಚನಾಮೆ ಕಾಲಕ್ಕೆ ಪೊಟೋಗಳನ್ನು ತೆಗೆದಿದ್ದು ಇಲ್ಲಾ. ಯಾವುದೇ ಜಪ್ತು ಪಂಚನಾೆಮಯನ್ನು ಠಾಣೆಯಲ್ಲಿ ಮಾಡಿದ್ದೇ ಇಲ್ಲಾ ಎಂದರೆ ಸರಿಯಲ್ಲ. ಯಾವುದೇ ಬಟ್ಟೆಗಳನ್ನು ಜಪ್ತು ಮಾಡಿದ್ದೇ ಇಲ್ಲಾ ಎಂದರೆ ಸರಿಯಲ್ಲ. ದೂರುದಾರರು ನನ್ನ ತಮ್ಮ ಆಗಿದ್ದರಿಂದ ಹಾಗೂ ಚಾಸಾ 8 ನನ್ನ ಭಾವ ಆಗಿದ್ದ ಕಾರಣ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಠಾಣೆಯಲ್ಲಿ ತಯಾರಿಸಿದ ಸುಳ್ಳು ಪಂಚನಾಮೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಸದರಿ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲವೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**